# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 1017 |
| ಸದಸ್ಯರ ಹೆಸರು | ಶ್ರೀ ಭೀಮರಾವ್ ಬಸವರಾಜ್ ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 24-02-2023 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ರೈತರು ಬೆಳೆದ ತೊಗರಿ ಬೆಳೆಗೆ ನೆಟೆ ರೋಗ ತಗಲಿ ಸಾಕಷ್ಟು ಪ್ರಮಾಣದಲ್ಲಿ ಬೆಳೆಗಳು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2022-23ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಒಟ್ಟು 1.13 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆ ಬಿತ್ತನೆಯಾಗಿರುತ್ತದೆ, ಈ ಪೈಕಿ 14495 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆ ಸಂಕೀರ್ಣ ನೆಟೆ ರೋಗದಿಂದ ಬೆಳೆ ಹಾನಿಯಾಗಿರುವುದು ಕೃಷಿ ಮತ್ತು ಕಂದಾಯ ಇಲಾಖೆಯ ಪ್ರಾಥಮಿಕ ವರದಿಯಿಂದ ಕಂಡುಬಂದಿರುತ್ತದೆ. |
| ಆ) | ಬಂದಿದ್ದಲ್ಲಿ ಸರ್ಕಾರವು ಕೈಗೊಂಡ ಕ್ರಮವೇನು; | ಕೀಟ ಹಾಗೂ ರೋಗಗಳ ಕುರಿತು ಸ್ಥಿತಿಗತಿಗಳ ಬಗ್ಗೆ ತಿಳಿಯಲು ಕೃಷಿ ಇಲಾಖೆ ಮತ್ತು ಕೃಷಿ ವಿಶ್ವ ವಿದ್ಯಾಲಯದ ವಿಜ್ಞಾನಿಗಳಿಂದ ಕ್ಷಿಪ್ರ ಸಂಚಾರ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. ರೋಗದ ಹತೋಟಿಗಾಗಿ ಇಲಾಖೆಯಿಂದ ಕೃಷಿ ಸಂಜೀವಿನಿ ವಾಹನಗಳ ಮೂಲಕ ವಿವಿಧ ಗ್ರಾಮಗಳಲ್ಲಿ ತರಬೇತಿ/ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹತೋಟಿಗಾಗಿ ತಾಂತ್ರಿಕ ಮಾಹಿತಿಯನ್ನು ರೈತರಿಗೆ ನೀಡಲಾಗಿರುತ್ತದೆ.<br><br>ನೆಟೆ ರೋಗದಿಂದ ರೈತರ ನೇರ ಪ್ರಶ್ನೆಗಳಿಗೆ ಉತ್ತರಿಸಲು ದಿನಾಂಕ: 30.11.2022 ರಂದು ನೇರ ದೂರವಾಣಿ ಸಂವಾದ (ಫೋನ್ ಇನ್ ಕಾರ್ಯಕ್ರಮ) ವನ್ನು ಹಮ್ಮಿಕೊಳ್ಳಲಾಗಿರುತ್ತದೆ ಅಲ್ಲದೇ ವಿವಿಧ ದಿನಪತ್ರಿಕೆಗಳ ಮೂಲಕ ನೆಟೆರೋಗ ಹತೋಟಿಗೆ ತಾಂತ್ರಿಕ ಸಲಹೆಗಳನ್ನು ಸಹ ಪ್ರಚುರಪಡಿಸಲಾಗಿರುತ್ತದೆ. ರೋಗದ ಹತೋಟಿಗಾಗಿ ರೈತ ಸಂಪರ್ಕ ಕೇಂದ್ರಗಳಲ್ಲಿ ಟ್ರೈಕೋಡರ್ಮಾ ಮತ್ತು ಕಾರ್ಬಂಡೈಜಿಮ್ + ಮ್ಯಾಂಕೊಜೆಬ್ ಶಿಲೀಂದ್ರನಾಶಕಗಳನ್ನು ದಾಸ್ತಾನೀಕರಿಸಿ ಸಹಾಯಧನದಡಿ ವಿತರಿಸಲಾಗಿರುತ್ತದೆ. ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ. |

| | | |
|---|---|---|
| | | ಕೃಷಿ ಇಲಾಖೆಯ ಕ್ಷೇತ್ರ ಮಟ್ಟದ ಅಧಿಕಾರಿಗಳು ಗ್ರಾಮ ಮಟ್ಟದಲ್ಲಿ ಸಭೆಗಳನ್ನು ಏರ್ಪಡಿಸಿ ಕರ ಪತ್ರಗಳ ಮೂಲಕ, ಆಡಿಯೋ ಸಂದೇಶದ ಮೂಲಕ, ಪತ್ರಿಕಾ ಮಾಧ್ಯಮಗಳಲ್ಲಿ ಪ್ರಕಟಣೆ ಹೊರಡಿಸಿ ನೆಟೆ ರೋಗ ನಿರ್ವಹಣೆ ಕ್ರಮಗಳ ಕುರಿತು ರೈತರಿಗೆ ಮಾಹಿತಿ ನೀಡಲಾಯಿಗಿರುತ್ತದೆ. |
| ಇ) | ಬೆಳೆಗಳ ಹಾನಿಯಿಂದ ಸರ್ಕಾರ ಇಲ್ಲಿಯವರೆಗೆ ಎಷ್ಟು ಪರಿಹಾರ ಧನ ನೀಡಲಾಗಿದೆ? (ವಿವರ ಒದಗಿಸುವುದು); | ಬೀದರ್ ಜಿಲ್ಲೆಯಲ್ಲಿ 2022 ರ ಮುಂಗಾರು ಹಂಗಾಮಿನಲ್ಲಿ ಅತಿವೃಷ್ಟಿಯಿಂದ ಒಟ್ಟು 0.66 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದ್ದು, ಈ ಪೈಕಿ 0.366 ಲಕ್ಷ ಹೆಕ್ಟೇರ್ ತೊಗರಿ ಬೆಳೆ ಹಾನಿಯಾಗಿರುತ್ತದೆ. ಜಂಟಿ ಸಮೀಕ್ಷೆ ವರದಿ ಪ್ರಕಾರ ಒಟ್ಟು ರೂ. 88.71 ಕೋಟಿ ಪರಿಹಾರ (Input Subsidy) ಪಾವತಿಯಾಗಿರುತ್ತದೆ. ಇದರ ಪೈಕಿ ರೂ. 49.78 ಕೋಟಿ ತೊಗರಿ ಬೆಳೆಗೆ ಪರಿಹಾರ (Input Subsidy) ಪಾವತಿಯಾಗಿರುತ್ತದೆ. ಬೀದರ್ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಸ್ಥಳ ನಿರ್ದಿಷ್ಟ ಪ್ರಕೋಪದಡಿ (Localized calamity) ತೊಗರಿ ಬೆಳೆಗೆ 51,408 ರೈತರಿಗೆ ರೂ. 8.39 ಕೋಟಿ ಬೆಳೆ ವಿಮೆ ಮೊತ್ತವನ್ನು ಇತ್ಯರ್ಥ ಪಡಿಸಲಾಗಿದೆ.<br><br>ಒಟ್ಟಾರೆ, ಬೀದರ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ತೊಗರಿ ಬೆಳೆಗಾದ ಹಾನಿಗೆ ರೈತರಿಗೆ ಒಟ್ಟು ರೂ. 58.17 ಕೋಟಿ ಪರಿಹಾರ ಮೊತ್ತವನ್ನು ವಿತರಿಸಲಾಗಿರುತ್ತದೆ.<br><br>ಮುಂದುವರೆದು, ತೊಗರಿ ಬೆಳೆಗೆ ನೆಟೆ ರೋಗದಿಂದ ಹಾನಿಯಾದ ರೈತರಿಗೆ ಪ್ರತಿ ಹೆಕ್ಟೇರ್ ಗೆ ರೂ.10,000/- ರಂತೆ ಗರಿಷ್ಠ 2 ಹೆಕ್ಟೇರ್ ಸೀಮಿತಗೊಳಿಸಿ, ಒಟ್ಟು ರೂ. 223 ಕೋಟಿ ಪರಿಹಾರದ ಮೊತ್ತವನ್ನು ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಿಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಘೋಷಣೆ ಮಾಡಿದ್ದು, ಎನ್.ಡಿ.ಆರ್.ಎಫ್/ ಎಸ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ ಪರಿಹಾರ ವಿತರಣೆ ಸಂಬಂಧ ಅನುದಾನಕ್ಕಾಗಿ ಆರ್ಥಿಕ ಇಲಾಖೆಯ ಸೂಕ್ತ ಆದೇಶಕ್ಕೆ ಸಲ್ಲಿಸಲಾಗಿದ್ದು, ಅನುದಾನ ಬಿಡುಗಡೆಯಾದ ಕೂಡಲೇ ನಿಯಮಾನುಸಾರ ಮಾರ್ಗಸೂಚಿಯನ್ವಯ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: AGRI/45/ACT/2023

(ಬಿ.ಸಿ. ಪಾಟೀಲ್)
ಕೃಷಿ ಸಚಿವರು